ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಶ್ರೀ ಸಿ ಜೆ ಎ ರವರಿಂದಃ-

1. ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

2. ದಿನಾಂಕ 01.01.2011 ರ ಅಸಲು ನೋಂದಣಿ ಕ್ರಯ ಪತ್ರವನ್ನು ನಿಪಿ-1 ಎಂದು, ದಿನಾಂಕ 21.12.1986 ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಪಿ-2 ಎಂದು, ಒಂದು ಪಹಣಿ ಪತ್ರಿಕೆಯನ್ನು ನಿಪಿ-3 ಎಂದು, ದಿನಾಂಕ 27.12.2010 ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಪಿ-4 ಎಂದು, ದಿನಾಂಕ 17.03.2012 ರ ನೋಟಿಸ್ ಅನ್ನು ನಿಪಿ-5 ಎಂದು, ಈ ನೋಟಿಸಿಗೆ ಸಂಬಂಧಪಟ್ಟ ಅಂಚೆ ರಶೀದಿಯನ್ನು ನಿಪಿ-5(ಎ) ಎಂದು, ಜಾರಿಯಾಗದೆ ವಾಪಸ್ಸು ಬಂದಿರುವ 4 ಅಂಚೆ ಲಕೋಟೆಗಳನ್ನು ನಿಪಿ-6 ರಿಂದ ನಿಪಿ-9 ಎಂದು ಗುರುತಿಸಿ, ಈಗ ಇವುಗಳನ್ನು ತೆರೆದು ನೋಡಲಾಗುತ್ತಿದ್ದು ಇವುಗಳಲ್ಲಿ ಇರುವ ನೋಟಿಸಿನ ನಕಲುಗಳನ್ನು ಕ್ರಮವಾಗಿ ನಿಪಿ-6(ಎ) ರಿಂದ ನಿಪಿ-9(ಎ) ಎಂದು ಗುರುತಿಲಾಯಿತು. ಎರಡು ಅಂಚೆ ದೃಢೀಕರಣ ಪತ್ರಗಳನ್ನು ನಿಪಿ-10 ಮತ್ತು ನಿಪಿ-11 ಎಂದು, 6 ಫೋಟೋಗಳನ್ನು ನಿಪಿ-12 ರಿಂದ ನಿಪಿ-17 ಎಂದು, ಇದಕ್ಕೆ ಸಂಬಂಧಪಟ್ಟ ಒಂದು ಸಿಡಿಯನ್ನು ನಿಪಿ-18 ಎಂದು ಗುರುತಿಸಲಾಯಿತು.

ಪಾಟೀ ಸವಾಲು : ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಎಂ. ಅನಿತ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.